**Code No. 16 Z**

## ವಾಣಿಜ್ಯ ಪರೀಕ್ಷೆಗಳು

# ಕನ್ನಡ ಶೀಘ್ರಲಿಪಿ — ಪ್ರವೀಣ ದರ್ಜೆ — ತೃತೀಯ ಪತ್ರಿಕೆ

## ಸಂಕ್ಷೇಪಿಸುವಿಕೆ

ಜುಲೈ, 2015

ವೇಳೆ { ಉಕ್ತಲೇಖನ : 10 ನಿಮಿಷಗಳು
ವಿಸ್ತರಣೆ : 1 ಗಂಟೆ 30 ನಿಮಿಷಗಳು }

ಪರಮಾವಧಿ ಅಂಕಗಳು : 100

***ಓದುಗರಿಗೆ ಸೂಚನೆಗಳು :***

1) ಈ ಕೆಳಗೆ ಕೊಟ್ಟಿರುವ ವಿಷಯವನ್ನು ಒಂದು ನಿಮಿಷಕ್ಕೆ ಮುನ್ನೂರು (300) ಅಕ್ಷರಗಳ ವೇಗದಲ್ಲಿ ಪ್ರಶ್ನೆ ಪತ್ರಿಕೆಯಲ್ಲಿ ಸೂಚಿಸಿದ ರೀತಿಯಲ್ಲೇ ಓದತಕ್ಕದ್ದು.

2) ಉಕ್ತಲೇಖನ ಮುಗಿದ ನಂತರ ಅಭ್ಯರ್ಥಿಗಳು ಶೀಘ್ರಲಿಪಿಯನ್ನು ಪರೋಕ್ಷ ವಿಧಾನದಲ್ಲಿ ಸುಮಾರು 1000 ಅಕ್ಷರಗಳಿಗೆ ಲಿಪಿ ಬರಹದಲ್ಲಿ ಸಂಕ್ಷೇಪಿಸಬೇಕೆಂದು ಅಭ್ಯರ್ಥಿಗಳಿಗೆ ಸೂಚನೆ ನೀಡತಕ್ಕದ್ದು

---

ದಿನಾಂಕ ಹದಿನೈದನೇ ಅಕ್ಟೋಬರ್ ಎರಡು ಸಾವಿರದ ಹದಿಮೂರರಂದು ವಿಧಾನ ಮಂಡಲದ ಉಭಯ ಸದಸ್ಯರನ್ನುದ್ದೇಶಿಸಿ ಮಾನ್ಯ ರಾಜ್ಯಪಾಲರು ಮಾಡಿದ ಭಾಷಣಕ್ಕೆ ವಂದನೆಯನ್ನು ಸಲ್ಲಿಸುತ್ತಾ ಮಾನ್ಯ ವಿಧಾನ ಸಭಾ
$\frac{1}{4}$ ಸದ/ಸ್ಯರೊಬ್ಬರು ಮಾಡಿದ ಭಾಷಣ.

ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ನಿರುದ್ಯೋಗದ ಬಗ್ಗೆ ಪ್ರಸಾಪ ಮಾಡಿದ್ದಾರೆ. ಇಂದು ಗ್ರಾಮಾಂತರ ಪ್ರದೇಶಗಳಲ್ಲಿ ನಿರುದ್ಯೋಗ ಸಮಸ್ಯೆಗಳನ್ನು ಪರಿಹಾರ
$\frac{1}{2}$ ಮಾಡಲು ಸರ್ಕಾರದವರು ನಾನಾ/
ಯೋಜನೆಗಳನ್ನು ರೂಪಿಸಿದ್ದಾರೆಂದು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಈ ನಿರುದ್ಯೋಗ ಸಮಸ್ಯೆಯನ್ನು ಸಂಪೂರ್ಣವಾಗಿ ಬಗೆಹರಿಸಲು ಸರ್ಕಾರದವರು ಹೆಚ್ಚು ಹೆಚ್ಚು ಹಣವನ್ನು ನೀರಾವರಿ
ಯೋಜನೆಗಳಲ್ಲಿ ತೊಡ/ಗಿಸಬೇಕು. ದೊಡ್ಡ $\frac{3}{4}$
ದೊಡ್ಡ ಕಾರ್ಖಾನೆಗಳನ್ನು ಸ್ಥಾಪಿಸುವುದಕ್ಕೆ ಏರ್ಪಾಡು ಮಾಡಬೇಕು ಮತ್ತು ಖಾಸಗಿ ಕ್ಷೇತ್ರಗಳಲ್ಲಿಯೂ ಕೂಡ ಕಾರ್ಖಾನೆಗಳನ್ನು ಸ್ಥಾಪನೆ ಮಾಡುವುದಕ್ಕೆ ಪ್ರೋತ್ಸಾಹ ಕೊಡುವುದರ ಮೂಲಕ ನಿರುದ್ಯೋಗ ಸಮಸ್ಯೆ
ಬಗೆಹXರಿಸಬೇಕೆಂದು ಸಲಹೆ ಮಾಡುತ್ತೇನೆ. 1

ಸರ್ಕಾರದವರು ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚು ಪ್ರೋತ್ಸಾಹ ಕೊಡುವ ಬಗ್ಗೆ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿ ಅವಿದ್ಯಾವಂತರ
ಸಂಖ್ಯೆ ಬಹಳ ಹೆಚ್ಚಾಗಿ/ದೆ. ಈ ಅವಿದ್ಯಾವಂತರ $\frac{1}{4}$
ಸಂಖ್ಯೆಯನ್ನು ಹೋಗಲಾಡಿಸಲು ಪ್ರಾಥಮಿಕ ಶಿಕ್ಷಣಕ್ಕೆ ಸರ್ಕಾರದವರು ಹೆಚ್ಚು ಹೆಚ್ಚು ಹಣ ಒದಗಿಸುವುದರ ಮೂಲಕ ಪ್ರೋತ್ಸಾಹ ಕೊಡಬೇಕೆಂದು ಸಲಹೆ ಮಾಡುತ್ತೇನೆ. ಮತ್ತು

[ Turn over

$\frac{1}{2}$ ರಾಜ್ಯದ ಕೆಲವು ಜಿಲ್ಲೆಗಳ/ಲ್ಲಿ ಪಂಚಾಯಿತಿಯವರು,
ತಾಲ್ಲೂಕು ಪಂಚಾಯಿತಿಯವರು ನಡೆಸುತ್ತಿರುವ
ಪ್ರಾಥಮಿಕ ಶಾಲೆಗಳಿಗೂ ಕೂಡ ಸರ್ಕಾರದವರು
ಆದಷ್ಟು ಹೆಚ್ಚು ಹೆಚ್ಚು ಅನುದಾನವನ್ನು
ನೀಡಬೇಕೆಂದು ಹಾಗೂ ಇನ್ನೂ ಹೆಚ್ಚು
$\frac{3}{4}$ ಪ್ರಾಥಮಿಕ ಶಾಲೆಗಳ/ನ್ನು ಪ್ರಾರಂಭ ಮಾಡಲು
ಅವಕಾಶ ಕಲ್ಪಿಸಬೇಕೆಂದು ಅರಿಕೆ ಮಾಡುತ್ತೇನೆ.

ಇನ್ನು ಸಂಚಾರ ವ್ಯವಸ್ಥೆಯ ಬಗ್ಗೆ
ರಾಜ್ಯಪಾಲರ ಭಾಷಣದಲ್ಲಿ ಹೇಳಿರುವುದು
ಕಂಡುಬಂದಿಲ್ಲ. ಈಗ ಒಂದು ಹಳ್ಳಿಯಿಂದ
2 ಮತ್ತೊಂದು ಹಳ್ಳಿಗೆ ಹೋಗಲು ಸರಿಯಾXದ
ರಸ್ತೆಗಳು ಇಲ್ಲವಾಗಿದೆ. ಮತ್ತೆ ಕೆಲವು ಕಡೆ
ನದಿಗಳನ್ನು ದಾಟಲು ಸೇತುವೆಗಳು ಇಲ್ಲದೇ
ಬಹಳ ತೊಂದರೆಯಾಗಿದೆ. ಅಲ್ಲದೆ ಇರುವ
ರಸ್ತೆಗಳನ್ನು ರಿಪೇರಿ ಮಾಡಿಸಲು ಗ್ರಾಮ
$\frac{1}{4}$ ಪಂಚಾಯಿತಿಯವರಿಗೆ ಹಣವಿಲ್ಲದೇ/ ಬಹಳ
ಕಷ್ಟವಾಗಿದೆ. ಆದ್ದರಿಂದ ಸರ್ಕಾರದವರೇ
ಎಲ್ಲೆಲ್ಲಿ ರಸ್ತೆ ಮತ್ತು ಸೇತುವೆಗಳ
ಅಗತ್ಯವಿದೆಯೋ ಅಲ್ಲೆಲ್ಲಾ ರಸ್ತೆ ಮತ್ತು
ಸೇತುವೆಗಳ ತ್ವರಿತ ಕಾಮಗಾರಿಯನ್ನು
ಮಾಡಿಸಬೇಕೆಂದು ಸಲಹೆ ಮಾಡುತ್ತೇನೆ. ಈ
$\frac{1}{2}$ ಕೆಲಸಗ/ಳಿಗೆ ಹಣವಿಲ್ಲವೆಂದು ಸರ್ಕಾರದವರು
ನೆಪ ಹೇಳಬಾರದು. ರಸ್ತೆ ಸೌಕರ್ಯವನ್ನು
ಪ್ರತಿ ಹಳ್ಳಿಗೂ ಒದಗಿಸುವುದು
ಲೋಕೋಪಯೋಗಿ ಇಲಾಖೆಯ ಆದ್ಯ
ಕರ್ತವ್ಯವಾಗಿರುವುದರಿಂದ ಇದರ ಕಡೆಗೆ
$\frac{3}{4}$ ಹೆಚ್ಚಿನ ಗಮನಕೊಡಬೇ/ಕಾಗಿರುವುದು
ಅವಶ್ಯಕವೆಂದು ಭಾವಿಸುತ್ತೇನೆ.

ರಾಜ್ಯಪಾಲರು ತಮ್ಮ ಭಾಷಣದಲ್ಲಿ
ಸಾರ್ವಜನಿಕ ಆಸ್ಪತ್ರೆಗಳ ವಿಚಾರವನ್ನು ಪ್ರಸ್ತಾಪ
ಮಾಡಿದ್ದಾರೆ. ನಮ್ಮ ಆರೋಗ್ಯ ಮಂತ್ರಿಗಳಿಗೆ
ಒಂದು ಮಾತನ್ನು ಹೇಳಬೇಕಾಗಿದೆ.
ಏನೆಂದರೆX ಗ್ರಾಮಾಂತರ ಪ್ರದೇಶ 3
ಗಳಲ್ಲಿರತಕ್ಕಂತ ಆಸ್ಪತ್ರೆಗಳಿಗೆ ಸಾಕಷ್ಟು
ಪ್ರಮಾಣದಲ್ಲಿ ಔಷಧಿ ಸಾಮಗ್ರಿಗಳನ್ನು ಕಾಲಕ್ಕೆ
ಸರಿಯಾಗಿ ಹಂಚುತ್ತಿಲ್ಲ. ಇದರಿಂದ ಬಡ
ರೋಗಿಗಳಿಗೆ ಬಹಳ ತೊಂದರೆಯಾಗುತ್ತಿದೆ.
ಏಕೆಂದರೆ ಬಡ/ವರ ಹತ್ತಿರ ಪೇಟೆಯಲ್ಲಿ $\frac{1}{4}$
ದುಡ್ಡು ಕೊಟ್ಟು ಔಷಧಿಯನ್ನು ತರಲು
ಹಣವಿರುವುದಿಲ್ಲ. ಮುಂದೆಯಾದರೂ ಕೂಡ
ನಮ್ಮ ಆರೋಗ್ಯ ಮಂತ್ರಿಗಳು ಗ್ರಾಮಾಂತರ
ಪ್ರದೇಶಗಳಲ್ಲಿರತಕ್ಕಂಥ ಆಸ್ಪತ್ರೆಗಳಿಗೆ ಹೆಚ್ಚು
ಔಷಧಿ ಸಾಮಗ್ರಿಗಳ/ನ್ನು ಹಂಚಿಕೆ ಮಾಡಲು $\frac{1}{2}$
ಸೂಕ್ತ ಕ್ರಮಕೈಗೊಳ್ಳಬೇಕು.

ಮುಂದುವರಿದು ನಮ್ಮ ರಾಜ್ಯದಲ್ಲಿರುವ
ಅಭಾವ ಪರಿಸ್ಥಿತಿಯನ್ನು ನಿವಾರಿಸುವುದಕ್ಕಾಗಿ
ಸರ್ಕಾರದವರು ಸಾಕಷ್ಟು ತೀವ್ರ ಗತಿಯಿಂದ
ಶೀಘ್ರವಾದ ಕಾರ್ಯಕ್ರಮಗಳನ್ನು ತೆಗೆದು/ $\frac{3}{4}$
ಕೊಂಡು ಅನೇಕ ಕೂಲಿಗಾರ ಜನತೆಯನ್ನು
ಕಾಪಾಡಿದರು. ಅಲ್ಲದೆ ಈ ಬಗ್ಗೆ ಎಷ್ಟು ಹಣ
ಖರ್ಚು ಮಾಡಬೇಕಾಗಿತ್ತೋ ಕೆಲವು ಜಿಲ್ಲೆಗಳಲ್ಲಿ
ಅದಕ್ಕಿಂತ ಹೆಚ್ಚಿಗೆ ಹಣ ಖರ್ಚಾಗಿದೆ. ಇನ್ನು
ಕೆಲವು ಜಿಲ್ಲೆಗಳಿಗೆ ಕೊಡಬೇಕಾದ ಹಣXವನ್ನು 4
ಕೊಟ್ಟಿಲ್ಲ. ಅದನ್ನು ಕೂಡಲೇ ಆಯಾ ಜಿಲ್ಲೆಗಳಿಗೆ
ಕೊಡಬೇಕೆಂದು ನನ್ನ ವಿನಂತಿ. ಏಕೆಂದರೆ
ಅನೇಕ ಕಾಮಗಾರಿಗಳು ಅಪೂರ್ಣವಾಗಿವೆ.
ಅಂತಹ ಕಾಮಗಾರಿಗಳನ್ನು ಪೂರ್ತಿ
ಮಾಡುವುದಕ್ಕೆ ಸರ್ಕಾರದವರು ಸಾಕಷ್ಟು
ಹಣ/ವನ್ನು ಒದಗಿಸಿಕೊಡಬೇಕು. ಕೆಲವು ಕಡೆ $\frac{1}{4}$
ಹಣವನ್ನು ಒದಗಿಸಿದ್ದರೂ ಕೂಡ

ಪೂರ್ತಿಯಾಗಿಲ್ಲ. ಅಂಥ ಪೂರ್ತಿಯಾಗದೇ ಇರುವ ಕೆಲಸಗಳನ್ನು ಜಾಗ್ರತೆಯಾಗಿ ಪೂರ್ತಿ ಮಾಡುವಂತೆ ಸಂಬಂಧಪಟ್ಟ ಇಲಾಖೆಯ
$\frac{1}{2}$ ಅಧಿಕಾರಿಗಳಿಗೆ/ ಆದೇಶ ನೀಡಬೇಕೆಂದು ಹೇಳಬಯಸುತ್ತೇನೆ.

ಹತ್ತನೇ ರಾಷ್ಟ್ರೀಯ ಕ್ರೀಡಾಕೂಟವನ್ನು ಬೆಂಗಳೂರಿನಲ್ಲಿ ನಡೆಸುವ ಉದ್ದೇಶದಿಂದ ಸರ್ಕಾರವು ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಂಗಣ ಹಾಗೂ ಮತ್ತಿತರ ಸೌಲಭ್ಯಗಳನ್ನು
$\frac{3}{4}$ ಒಂದು ನೂರಾ/ ನಲವತ್ತು ಕೋಟಿ ರೂಪಾಯಿಗಳ ವೆಚ್ಚದಲ್ಲಿ ನಿರ್ಮಿಸುತ್ತಿದೆ. ಈ ಉದ್ದೇಶಕ್ಕಾಗಿ ರಾಜ್ಯ ಸರ್ಕಾರವು ಮೂವತ್ತೈದು ಕೋಟಿ ರೂಪಾಯಿಗಳನ್ನು ಮತ್ತು ಕೇಂದ್ರ ಸರ್ಕಾರವು ಎಂಟು ಕೋಟಿ ರೂಪಾಯಿಗಳನ್ನು
5 ಬಿಡುಗಡೆ ಮಾಡಿದೆ. ಈ ಕ್ರೀಡಾಕೂಟವXನ್ನು ಸ್ಮರಣೆಯ ಘಟನೆಯನ್ನಾಗಿ ಮಾಡಲು ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಸರ್ಕಾರ ಕೈಗೊಂಡಿದೆ. ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣ ಸಂಕೀರ್ಣದಲ್ಲಿ ಒಂದು ರಾಷ್ಟ್ರೀಯ ಮಟ್ಟದ ಈಜುಕೊಳವನ್ನು ನಿರ್ಮಿಸಲಾಗುತ್ತಿದೆ.

$\frac{1}{4}$ ಸ/ರ್ಕಾರದ ನೂತನ ಕೃಷಿ ನೀತಿಯನ್ವಯ ತೋಟಾಗಾರಿಕೆ ಕ್ಷೇತ್ರವು ಅಭಿವೃದ್ಧಿಯಲ್ಲಿ ಆದ್ಯತಾ ವಲಯವಾಗಿದೆ. ತೋಟಗಾರಿಕೆ ಬೆಳೆಗಳ ಕ್ಷೇತ್ರ ವಿಸ್ತರಣೆ, ತೋಟಗಾರಿಕೆ ಉತ್ಪನ್ನಗಳ ಹೆಚ್ಚಳ ಮತ್ತು ಉತ್ತಮ ತಳಿ
$\frac{1}{2}$ ಸಸಿಗಳ/ ಉತ್ಪಾದನೆ ಮತ್ತು ವಿತರಣೆಗಾಗಿ ಸರ್ಕಾರ ಹಲವಾರು ಯೋಜನೆಗಳನ್ನು ರೂಪಿಸಿದೆ. ಸಣ್ಣ ಮತ್ತು ಅತಿ ಸಣ್ಣ, ತೋಟಗಾರಿಕೆ ಬೆಳೆಗಾರರನ್ನು ಪ್ರೋತ್ಸಾಹಿಸಲು ಆರಂಭವಾಗಿರುವ “ನಮ್ಮ ಮನೆ ಮತ್ತು ನಮ್ಮ
ತೋಟ” ಯೋಜನೆಗೆ ಎ/ರಡು ಸಾವಿರದ $\frac{3}{4}$
ಹದಿಮೂರು ಮತ್ತು ಹದಿನಾಲ್ಕನೇ ಸಾಲಿನಲ್ಲಿ ಐದು ನೂರು ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಸುಮಾರು ಹದಿಮೂರು ಕೋಟಿ ರೂಪಾಯಿಗಳ ವೆಚ್ಚದ ಸಮಗ್ರ ಸಹಕಾರಿ ಹಣ್ಣು ಮತ್ತು ತರಕಾರಿ ಮಾರುಕXಟ್ಟೆ 6
ಹಾಗೂ ರಫ್ತು ಯೋಜನೆಯೊಂದನ್ನು ಕರ್ನಾಟಕವು ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ಮಂಡಳಿಯ ಮಂಜೂರಾತಿಗಾಗಿ ಸಲ್ಲಿಸಿದೆ.

ಇನ್ನು ಪಾನ ನಿರೋಧವನ್ನು ಹಂತ ಹಂತವಾಗಿ ಜಾರಿಗೆ ತರಲಾಗುತ್ತದೆಂದು ರಾಜ್ಯಪಾಲರು ಹೇಳಿದ್ದಾರೆ./ ಇದುವರೆಗೆ $\frac{1}{4}$
ಆಡಳಿತ ನಡೆಸಿದ ಎಲ್ಲ ಸರ್ಕಾರಗಳೂ ಈ ಮಾತನ್ನು ಹೇಳಿಕೊಂಡು ಬಂದಿವೆ. ಆದರೆ ಯಾರೂ ಕೂಡ ಇದರಲ್ಲಿ ಯಶಸ್ವಿಯಾಗಿಲ್ಲ. ಈ ರೀತಿ ಜಾರಿಗೆ ತರಲಾಗದ ಘೋಷಣೆಗಳನ್ನು ಏತಕ್ಕಾಗಿ ಮಾಡುತ್ತಾರೋ ನನ/ಗಂತೂ $\frac{1}{2}$
ಅರ್ಥವಾಗುವುದಿಲ್ಲ. ಸರ್ಕಾರದವರು ಯಾವುದೇ ಕಾನೂನು ತಂದರೂ ಪಾನ ನಿರೋಧವನ್ನು ಜಾರಿಗೆ ತರುವುದಕ್ಕಾಗುವುದಿಲ್ಲ. ಇವತ್ತು ಮಧ್ಯಪಾನದಿಂದ ಹೆಚ್ಚಾಗಿ ಹಾಳಾಗುತ್ತಿರುವವರು ಎಂದರೆ ಕೆಳವರ್ಗದ ಜನ/ರು. ಇದು ತಮಗೂ ಗೊತ್ತು. ಕಲಬೆರಕೆ $\frac{3}{4}$
ಹೆಂಡ, ಸಾರಾಯಿಗಳನ್ನು ಇವರು ಕುಡಿಯುತ್ತಿರುವುದರಿಂದ ಇವರ ಆರೋಗ್ಯ ಹದಗೆಡುತ್ತಿದೆ. ಆದ್ದರಿಂದ ಸರ್ಕಾರದವರು ಆರೋಗ್ಯಕ್ಕೆ ಹೆಚ್ಚು ಹಾನಿಯಾಗದಂಥ ಬಿಯರ್ ಮುಂತಾದ ಪಾನೀಯXಗಳನ್ನು ಕಡಿಮೆ 7
ಬೆಲೆಗೆ ಸಾರ್ವಜನಿಕರಿಗೆ ಸಿಗುವ ವ್ಯವಸ್ಥೆ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಹತ್ತನೇ ಯೋಜನೆಯ ಅಂತ್ಯದ ವೇಳೆಗೆ ಸರ್ವರಿಗೂ ಪ್ರಾಥಮಿಕ ಶಿಕ್ಷಣ ನೀಡುವ

$\frac{1}{4}$ ಗುರಿಯನ್ನು ಸಾಧಿಸುವುದಕ್ಕಾಗಿ ನಮ್ಮ/
ಸರ್ಕಾರವು ಬದ್ಧವಾಗಿದೆ ಮತ್ತು ರಾಜ್ಯದಲ್ಲಿ
ಸಂಪೂರ್ಣ ಸಾಕ್ಷರತೆ ಸಾಧಿಸುವ ಗುರಿಗೆ
ಸರ್ಕಾರ ಬದ್ಧವಾಗಿದೆ. ಇಪ್ಪತ್ತೈದು ಲಕ್ಷಕ್ಕೂ
ಅಧಿಕ ವಯಸ್ಕ ಅನಕ್ಷರಸ್ಥರಿಗೆ ಸಾಕ್ಷರತೆ
ಮೂಡಿಸಲು “ಕನ್ನಡ ನಾಡು – ಸಾಕ್ಷರ
$\frac{1}{2}$ ನಾಡು”/ ಎಂಬ ಅಪೂರ್ವ ಯೋಜನೆಯನ್ನು
ಸರ್ಕಾರವು ಆರಂಭಿಸಿದೆ. ಈ ಯೋಜನೆಯನ್ನು
ರಾಜ್ಯೋತ್ಸವದ ದಿನದಂದು ಆರಂಭಿಸಿದ್ದು,
ವಿಶೇಷವಾಗಿ ರೂಪಿಸಿದ ಪಠ್ಯಪುಸ್ತಕವನ್ನು ಅಕ್ಷರ
ಕಲಿಕೆಗಾಗಿ ಉಪಯೋಗಿಸಲಾಗುತ್ತದೆ.

$\frac{3}{4}$ ಇನ್ನು ಕ/ಲಾವಿದರ ಯೋಗಕ್ಷೇಮದ
ಬಗ್ಗೆ ಹೇಳುವುದಾದರೆ, ಹಿಂದಿನ ರಾಜಾಶ್ರಯ
ತಪ್ಪಿದ ನಂತರ ಈಗಿನ ಪ್ರಜಾಪ್ರಭುತ್ವದಲ್ಲಿ
ಇದರ ಹೊಣೆ ಸರಕಾರ ಮತ್ತು ಪ್ರಜೆಗಳ
ಮೇಲೆಯೇ ಇರುತ್ತದೆಂದು ಹೇಳಬೇಕಾಗಿಲ್ಲ.
8 ಕಲಾವಿದರೇ ನಿXಜವಾಗಿ ಒಂದು ದೇಶದ ಆಸ್ತಿ.
ಅವರುಗಳ ಪೋಷಣೆ ಮತ್ತು ಯೋಗಕ್ಷೇಮ
ಸರಕಾರ ಹಾಗೂ ಪ್ರಜೆಗಳ ಒಂದು ಪವಿತ್ರ
ಕರ್ತವ್ಯ ಹಾಗೂ ಜವಾಬ್ದಾರಿ ಆಗಿರುತ್ತದೆ.
ಕಲಾವಿದರು ನೆಮ್ಮದಿಯಿಂದಿದ್ದರೆ ಕಲೆ
$\frac{1}{4}$ ಬೆಳೆಯಲು, ವಿಕಾಸಗೊ/ಳ್ಳಲು ಸಾಧ್ಯ. ನಮ್ಮ
ನಾಡಿನ ಕಲಾಶ್ರೀಯನ್ನು ಶ್ರೀಮಂತಗೊಳಿಸುವ
ಕಲಾವಿದರನ್ನು ಸಮಾಜವು ಪೋಷಿಸಬೇಕು,
ಗೌರವಿಸಬೇಕು. ಕಲೆ ಮತ್ತು ಸಂಸ್ಕೃತಿಗಳ
ಅಭಿವೃದ್ಧಿಗೆ ನಮ್ಮ ಸರಕಾರವು ಅನೇಕ
$\frac{1}{2}$ ಯೋಜನೆಗಳನ್ನು ಹಾಕಿಕೊಂ/ಡು ಪ್ರೋತ್ಸಾಹ
ನೀಡುತ್ತಿರುವುದು ಶ್ಲಾಘನೀಯವಾಗಿದೆ.
ಅರ್ಹರಾದ ಕಲಾವಿದರನ್ನು ಸರಕಾರ ತಾನಾಗಿ
ಗುರುತಿಸಿ ಅವರನ್ನು ಗೌರವಿಸಬೇಕು. ಅವರಿಗೆ
ಎಲ್ಲ ರೀತಿಯ ನೆರವುಗಳನ್ನು ನೀಡಬೇಕು.
ನಮ್ಮ ನಾಡಿನ ಪ್ರಸಿದ್ಧ/ರಾದ ಕೆಲವು $\frac{3}{4}$
ಹಿರಿಯ ಕಲಾವಿದರನ್ನು ತಮಿಳುನಾಡು,
ಆಂಧ್ರಪ್ರದೇಶಗಳಲ್ಲಿರುವಂತೆ ಸಂಸ್ಥಾನ
ವಿದ್ವಾಂಸರನ್ನಾಗಿ ನೇಮಿಸಿ ಅವರಿಗೆ ಸೂಕ್ತ
ಸಂಭಾವನೆ ನೀಡಬೇಕೆಂದು ಒತ್ತಾಯಿಸುತ್ತೇನೆ.

ಸರ್ಕಾರದವರು ತಮ್ಮ ಸಂಪನ್ಮೂಲXಗಳಿಗೆ 9
ತಕ್ಕಂತೆ ನೌಕರರ ಹಿತಕ್ಕೆ ಸಹಾನುಭೂತಿ
ಪೂರ್ಣ ಗಮನವನ್ನು ಸದಾ ನೀಡಿದ್ದಾರೆ.
ವೇತನ ಪ್ರಮಾಣಗಳನ್ನು ತುಟ್ಟಿಭತ್ಯ, ನಗರ
ಪರಿಹಾರ ಭತ್ಯ ಮತ್ತು ಮನೆ ಬಾಡಿಗೆ
ಭತ್ಯಗಳ ವಿಚಾರವಾಗಿ ವೇತನ ಆಯೋಗ/ದ $\frac{1}{4}$
ಸಲಹೆಗಳನ್ನು ಕಾರ್ಯಗತ ಮಾಡುವ ನಿರ್ಧಾರ
ಕೈಗೊಂಡಿದ್ದರೂ ಸಹ ಈ ನಿಮಿತ್ತವಾಗಿ ರಾಜ್ಯ
ಸರ್ಕಾರಗಳ ಆರ್ಥಿಕ ಹೊರೆ ಹೆಚ್ಚಾಗದಂತೆ
ನೋಡಿಕೊಳ್ಳುವ ಬಗ್ಗೆ ಸಮಗ್ರ ರಾಜ್ಯಕ್ಕೆ
ಅನ್ವಯಿಸತಕ್ಕ ಸೂಕ್ತ ಕಾರ್ಯ ನೀತಿಯನ್ನು
ಅ/ಳವಡಿಸಿಕೊಳ್ಳಬೇಕೆಂದು ಸರ್ಕಾರಕ್ಕೂ $\frac{1}{2}$
ಏಳನೆಯ ಆರ್ಥಿಕ ಆಯೋಗಕ್ಕೂ ಒತ್ತಾಯ
ಪೂರ್ವಕವಾಗಿ ಬೇಡಿಕೊಳ್ಳುತ್ತೇನೆ.

ಕೊನೆಯದಾಗಿ ಇದುವರೆಗೆ ಕೈಗೊಂಡ
ಸಾಧನೆಗಳನ್ನು ಉಳಿಸಿಕೊಳ್ಳಲು ಹಾಗೂ
ಒಳ್ಳೆಯ ಭವಿಷ್ಯ ಬರುವು/ದೆಂಬ ಆಸೆಯಿಂದ $\frac{3}{4}$
ಅತ್ಯವಶ್ಯಕವಾದ ಯೋಜನೆಗಳಿಗೆ ಅಲ್ಪ
ಪ್ರಮಾಣದ ಸರ್ಕಾರಿ ವೆಚ್ಚಕ್ಕೆ ಅವಕಾಶ
ಕಲ್ಪಿಸಬೇಕು ಹಾಗೂ ದುಂದು ವೆಚ್ಚವನ್ನು
ತಪ್ಪಿಸಲು ಪ್ರಯತ್ನ ಮಾಡಬೇಕೆಂದು ಹೇಳಿ ನನ್ನ
ಮಾತುಗಳನ್ನು ಮುಗಿಸುತ್ತೇನೆ.X 10